## **ಕರ್ನಾಟಕ ಲೋಕಾಯುಕ್ತ, ಬೆಂಗಳೂರು**

ಸಂಖ್ಯೆ: ಕಲೋ/ಸಿಬ್ಬಂದಿ-1/40/2013-14 ದಿನಾಂಕ 14/12/2021

## **ಸು ತ್ತೋ ಲೆ**

**ವಿಷಯ:** ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಕಲಂ 12(1) ಮತ್ತು 12(3)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿರುವ ವರದಿಗಳ ಪ್ರತಿಗಳನ್ನು ಒದಗಿಸುವ ಬಗ್ಗೆ.

----

ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಕಲಂ 12(1) ಮತ್ತು 12(3)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿರುವ ವರದಿಗಳ ಪ್ರತಿಗಳನ್ನು ಒದಗಿಸುವಂತೆ ಕೋರಿ ಈ ಕಛೇರಿಯ ನಕಲು ಶಾಖೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ.

ಮೇಲ್ಕಂಡ ಅರ್ಜಿಗಳಲ್ಲಿ, ಕರ್ನಾಟಕ ಲೋಕಾಯುಕ್ತ ಅಧಿನಿಯಮ 1984ರ ಕಲಂ 7(2-ಎ)ರಡಿಯಲ್ಲಿ ಸರ್ಕಾರದಿಂದ ವಹಿಸಲ್ಪಟ್ಟ ಪ್ರಕರಣಗಳಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿರುವ ವರದಿಗಳನ್ನು ಹೊರತುಪಡಿಸಿ, ಇನ್ನುಳಿದ ದೂರು ಪ್ರಕರಣಗಳಲ್ಲಿ, ಸದರಿ ಅಧಿನಿಯಮದ ಕಲಂ 12(1) ಮತ್ತು 12(3)ರಡಿಯಲ್ಲಿ ಸಕ್ಷಮ ಪ್ರಾಧಿಕಾರಕ್ಕೆ ಕಳುಹಿಸಿರುವ ವರದಿಗಳ ಪ್ರತಿಗಳನ್ನು ಪಕ್ಷಗಾರರಿಗೆ ಒದಗಿಸುವಂತೆ ತಿಳಿಸಲು ಗೌರವಾನ್ವಿತ ಲೋಕಾಯುಕ್ತರಿಂದ ನಿರ್ದೇಶಿಸಲ್ಪಟ್ಟಿರುತ್ತೇನೆ.

ನಿಬಂಧಕರು
ಕರ್ನಾಟಕ ಲೋಕಾಯುಕ್ತ

**ಇವರಿಗೆ**

ಉಪ ನಿಬಂಧಕರು (ಆಡಳಿತ) - 1

**ಪ್ರತಿಯನ್ನು ಮಾಹಿತಿಗಾಗಿ, ಕರ್ನಾಟಕ ಲೋಕಾಯುಕ್ತ, ಬೆಂಗಳೂರಿನ ಈ ಕೆಳಕಂಡ ಅಧಿಕಾರಿಗಳಿಗೆ ಕಳುಹಿಸಲಾಗಿದೆ**

1) ಗೌರವಾನ್ವಿತ ಲೋಕಾಯುಕ್ತರ ಕಾರ್ಯದರ್ಶಿಗಳು
2) ಗೌರವಾನ್ವಿತ ಲೋಕಾಯುಕ್ತರ ಪತ್ರಾಂಕಿತ ಸಹಾಯಕರು
3) ಗೌರವಾನ್ವಿತ ಉಪ ಲೋಕಾಯುಕ್ತ-1 ಮತ್ತು 2ರವರ ಪತ್ರಾಂಕಿತ ಸಹಾಯಕರು
4) ಅಪರ ನಿಬಂಧಕರು (ವಿಚಾರಣೆಗಳು) - 1 ರಿಂದ 20
5) ಉಪ ನಿಬಂಧಕರು (ಆಡಳಿತ) - 2
6) ಉಪ ನಿಬಂಧಕರು (ವಿಚಾರಣೆಗಳು) - 1 ರಿಂದ 5
7) ಸಹಾಯಕ ನಿಬಂಧಕರು (ಕಾ.ಅ.) - 1 ರಿಂದ 5
8) ಸಾರ್ವಜನಿಕ ಅಭಿಯೋಜಕರು
9) ಹಿರಿಯ ಸಹಾಯಕ ಸಾರ್ವಜನಿಕ ಅಭಿಯೋಜಕರು - 1 ಮತ್ತು 2
10) ಅಪರ ನಿಬಂಧಕರು (ವಿಚಾರಣೆಗಳು) - 1,2,5,6,17 ಮತ್ತು 18ರವರ ಮಂಡನಾಧಿಕಾರಿಗಳು